# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 359 |
| ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ ಗೌಡ |
| ಉತ್ತರಿಸುವ ದಿನಾಂಕ | 11-12-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹೊರ ರಾಜ್ಯದಲ್ಲಿರುವ ಕರ್ನಾಟಕ ಯಾತ್ರಿಕ ಭವನಗಳ ಸಂಖ್ಯೆ ಎಷ್ಟು? ಅವುಗಳು ಯಾವ ರಾಜ್ಯದಲ್ಲಿವೆ; ಅವುಗಳ ನಿರ್ವಹಣೆಗೆ ರಾಜ್ಯ ಸರ್ಕಾರ ಮಾಡುತ್ತಿರುವ ವೆಚ್ಚ ಎಷ್ಟು? (ಕಳೆದ ಐದು ವರ್ಷಗಳಲ್ಲಿ ಮಾಡಲಾದ ವೆಚ್ಚದ ವಿವರ ನೀಡುವುದು)</td><td>
ಹೊರ ರಾಜ್ಯದಲ್ಲಿ ಒಟ್ಟು 07 ಕರ್ನಾಟಕ ರಾಜ್ಯ ಛತ್ರಗಳ/ಯಾತ್ರಿಕ ಭವನಗಳಿದ್ದು, ವಿವರ ಕೆಳಕಂಡಿರುತ್ತದೆ.
<table>
<tr><th>ಕ್ರ. ಸಂ.</th><th>ರಾಜ್ಯ</th><th>ಕ್ಷೇತ್ರ</th></tr>
<tr><td rowspan="4">(1)</td><td rowspan="4">ಆಂಧ್ರಪ್ರದೇಶ</td><td>ತಿರುಮಲ</td></tr>
<tr><td>ತಿರುಚಾನೂರು</td></tr>
<tr><td>ಮಂತ್ರಾಲಯ</td></tr>
<tr><td>ಶ್ರೀಶೈಲಂ</td></tr>
<tr><td rowspan="2">(2)</td><td rowspan="2">ಮಹಾರಾಷ್ಟ್ರ</td><td>ತುಳಜಾಪುರ</td></tr>
<tr><td>ಗುಡ್ಡಾಪುರ</td></tr>
<tr><td>(3)</td><td>ಉತ್ತರಪ್ರದೇಶ</td><td>ವಾರಣಾಸಿ</td></tr>
</table>
ಆಯಾಯ ಛತ್ರಗಳಿಂದ ಸ್ವೀಕೃತವಾಗುವ ಆದಾಯವು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಲ್ಲಿ ನಿರ್ವಹಿಸಲಾಗುತ್ತಿರುವ ಹೊರ ರಾಜ್ಯ ಛತ್ರಗಳ ಸಂಯೋಜಿತ ನಿಧಿಯ ಖಾತೆಗೆ ಜಮೆಯಾಗುತ್ತಿದ್ದು, ಸದರಿ ಹೊರ ರಾಜ್ಯ ಛತ್ರಗಳ ಸಂಯೋಜಿತ ಖಾತೆಯಲ್ಲಿ ಕ್ರೂಢಿಕೃತವಾಗುವ ಮೊತ್ತದಿಂದ ಹೊರ ರಾಜ್ಯಗಳಲ್ಲಿರುವ ಕರ್ನಾಟಕ ರಾಜ್ಯ ಛತ್ರಗಳ ನಿರ್ವಹಣೆಯನ್ನು ಮಾಡಲಾಗುತ್ತಿದೆ.<br><br>
ಕರ್ನಾಟಕ ಸರ್ಕಾರದಿಂದ ಕಳೆದ ಐದು ವರ್ಷಗಳಲ್ಲಿ ಮಾಡಲಾದ ವೆಚ್ಚ ವಿವರಗಳು<br>
**(ರೂ.ಲಕ್ಷಗಳಲ್ಲಿ)**
<table>
<tr><th>ಹೊರ ರಾಜ್ಯ ಛತ್ರ</th><th>2019-20</th><th>2020-21</th><th>2021-22</th><th>2022-23</th><th>2023-24</th></tr>
<tr><td>ಆಂದ್ರ ಪ್ರದೇಶ ತಿರುಮಲ ಕರ್ನಾಟಕ ರಾಜ್ಯ ಛತ್ರ</td><td>-</td><td>250.00</td><td>-</td><td>100.00</td><td>200.00</td></tr>
<tr><td>ಆಂದ್ರ ಪ್ರದೇಶ</td><td>-</td><td>15.00</td><td>-</td><td>-</td><td>-</td></tr>
</table>
</td></tr>
</table>

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><td>ಶ್ರೀ ಶೈಲಂ ಕರ್ನಾಟಕ ರಾಜ್ಯ ಛತ್ರ</td><td></td><td></td><td></td><td></td><td></td></tr>
<tr><td>ಆಂದ್ರ ಪ್ರದೇಶ ಮಂತ್ರಾಲಯ ಕರ್ನಾಟಕ ರಾಜ್ಯ ಛತ್ರ</td><td>-</td><td>154.00</td><td>-</td><td>-</td><td>-</td></tr>
<tr><td>ಉತ್ತರ ಪ್ರದೇಶ, ವಾರಣಾಸಿ ಕರ್ನಾಟಕ ರಾಜ್ಯ ಛತ್ರ</td><td>-</td><td>5.00</td><td>-</td><td>-</td><td>-</td></tr>
<tr><td>ಮಹಾರಾಷ್ಟ್ರ, ತುಳಜಾಪುರ, ಕರ್ನಾಟಕ ರಾಜ್ಯ ಛತ್ರ</td><td>-</td><td>10.00</td><td>-</td><td>-</td><td>-</td></tr>
<tr><td>ಮಹಾರಾಷ್ಟ್ರ, ಗುಡ್ಡಾಪುರ, ಕರ್ನಾಟಕ ಭವನ</td><td colspan="5">ದಿನಾಂಕ:01.08.2024ರಂದು ಉದ್ಘಾಟನೆಗೊಂಡಿರುತ್ತದೆ.</td></tr>
</table>
</td></tr>
<tr><td>ಆ)</td><td>ಶ್ರೀಶೈಲಕ್ಕೆ ಕರ್ನಾಟಕದಿಂದ ವಾರ್ಷಿಕವಾಗಿ ತೆರಳುವ ಯಾತ್ರಿಕರ ಸಂಖ್ಯೆ ಎಷ್ಟು?</td><td>ಆಂಧ್ರಪ್ರದೇಶದಲ್ಲಿನ ಶ್ರೀಶೈಲಂ ಕ್ಷೇತ್ರಕ್ಕೆ ಕರ್ನಾಟಕ ರಾಜ್ಯದಿಂದ ಗಣನೀಯ ಪ್ರಮಾಣದಲ್ಲಿ ಯಾತ್ರಿಕರು ವಾರ್ಷಿಕವಾಗಿ ಭೇಟಿ ನೀಡುತ್ತಿದ್ದಾರೆ. ಶ್ರೀ ಕ್ಷೇತ್ರವು ಆಂದ್ರಪ್ರದೇಶದ ಸರ್ಕಾರದ ವ್ಯಾಪ್ತಿಗೊಳಪಟ್ಟಿರುವುದರಿಂದ ಹಾಗೂ ಆಂದ್ರಪ್ರದೇಶಕ್ಕೆ ಸೇರಿರುವುದರಿಂದ, ನಿಖರವಾದ ಅಂಕಿ ಅಂಶಗಳ ಮಾಹಿತಿ ಲಭ್ಯವಿರುವುದಿಲ್ಲ.</td></tr>
<tr><td>ಇ)</td><td>ಆಂಧ್ರಪ್ರದೇಶದ ಶ್ರೀಶೈಲದ ಮಲ್ಲಿಕಾರ್ಜುನ ಕ್ಷೇತ್ರದಲ್ಲಿರುವ ಯಾತ್ರಿಕ ಭವನ ನಿರ್ಮಾಣವಾಗಿದ್ದು ಯಾವಾಗ; ಸದರಿ ಕಟ್ಟಡ ದುಸ್ಥಿತಿಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?</td><td>ಆಂಧ್ರಪ್ರದೇಶದ ಶ್ರೀಶೈಲಂನ ಶ್ರೀ ಭ್ರಮರಾಂಭ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದಿಂದ ಗುತ್ತಿಗೆ ಪಡೆದಿರುವ ಜಾಗದಲ್ಲಿ ಕರ್ನಾಟಕ ರಾಜ್ಯ ಛತ್ರವನ್ನು 1969 ರಲ್ಲಿ ಅಡಿಗಲ್ಲು ಹಾಕಿ 1973ರಲ್ಲಿ ನಿರ್ಮಾಣ ಪೂರ್ಣಗೊಂಡಿರುತ್ತದೆ. ಕರ್ನಾಟಕ ರಾಜ್ಯ ಛತ್ರವು ಶಿಥಿಲಾವಸ್ಥೆಯಲ್ಲಿರುವುದು ಗಮನಿಸಲಾಗಿದೆ.<br><br>ಶ್ರೀಶೈಲಂನಲ್ಲಿ ರೂ.85-00 ಕೋಟಿಗಳ ವೆಚ್ಚದಲ್ಲಿ ನೂತನ ವಸತಿ ಸಂಕೀರ್ಣವನ್ನು ನಿರ್ಮಿಸಲು 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಘೋಷಿಸಿದ್ದು ಈ ಉದ್ದೇಶಕ್ಕಾಗಿ ಪ್ರಥಮ ಹಂತದಲ್ಲಿ ರೂ.45-00 ಕೋಟಿಗಳನ್ನು ಮಂಜೂರು ಮಾಡಿದ್ದು ಈವರೆವಿಗೆ ರೂ.33-75</td></tr>
</table>

| | ಪ್ರಶ್ನೆ | ಉತ್ತರ |
|---|---|---|
| | | ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದ್ದು, ಸದರಿ ಅನುದಾನವನ್ನು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರಿಗೆ ಬಿಡುಗಡೆಗೊಳಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಲೋ.ಇ 125 ಬಿಎಂಎಸ್ 2022 ದಿನಾಂಕ:25.08.2022 ರಲ್ಲಿ, ಲೋಕೋಪಯೋಗಿ ಇಲಾಖಾ ವತಿಯಿಂದ ಆಂಧ್ರಪ್ರದೇಶದ ಶ್ರೀಶೈಲಂನಲ್ಲಿ ಯಾತ್ರಿ ನಿವಾಸ ಕಟ್ಟಡ ನಿರ್ಮಾಣ ಕಾಮಗಾರಿಯ ರೂ.85.00 ಕೋಟಿಗಳ ವಿವರವಾದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>ಶ್ರೀಶೈಲಂನ ಶ್ರೀ ಭ್ರಮರಾಂಭ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದಿಂದ ಗುತ್ತಿಗೆ ಪಡೆದಿರುವ ಸದರಿ ಜಾಗದ ಗುತ್ತಿಗೆ ಅವಧಿಯನ್ನು 1997 ರಿಂದ ಆಂಧ್ರಪ್ರದೇಶ ಸರ್ಕಾರವು ನವೀಕರಿಸಿರುವುದಿಲ್ಲ. ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸುವ ಕುರಿತು ಉಭಯ ರಾಜ್ಯಗಳ ಮಾನ್ಯ ಸಚಿವರು ಹಾಗೂ ಅಧಿಕಾರಿಗಳು ಸಭೆಯನ್ನು ನಡೆಸಿ ಚರ್ಚಿಸಿ ಜಾಗದ ಗುತ್ತಿಗೆ ಸಮಸ್ಯೆಯನ್ನು ಇತ್ಯರ್ಥ ಪಡಿಸಿದ ಬಳಿಕ ಉದ್ದೇಶಿತ ವಸತಿ ಸಂಕೀರ್ಣವನ್ನು ನಿರ್ಮಿಸಲು ಪರಿಶೀಲಿಸಲಾಗುತ್ತಿದೆ. . |
| ಈ) | ಯಾತ್ರಿಕ ಭವನ ನಿರ್ಮಾಣ ಮಾಡಲು ಇರುವ ತೊಡಕುಗಳೇನು;(ಸಮಸ್ಯೆಗಳೇನು) ಯಾತ್ರಿಕ ಭವನ ನಿರ್ಮಾಣ ಮಾಡಲು ಕೈಗೊಂಡಿರುವ ಕ್ರಮಗಳೇನು; | ಶ್ರೀಶೈಲಂನ ಶ್ರೀ ಭ್ರಮರಾಂಭ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದಿಂದ ಗುತ್ತಿಗೆ ಪಡೆದಿರುವ ಸದರಿ ಜಾಗದ ಗುತ್ತಿಗೆ ಅವಧಿಯನ್ನು 1997 ರಿಂದ ಆಂಧ್ರಪ್ರದೇಶ ಸರ್ಕಾರವು ನವೀಕರಿಸಿರುವುದಿಲ್ಲ. ದಿನಾಂಕ:27-12-2023ರಂದು ಮುಜರಾಯಿ ಮತ್ತು ಸಾರಿಗೆ ಸಚಿವರು ಭೇಟಿ ನೀಡಿ ಸ್ಥಳ ಪರಿಶೀಲನ ನಡೆಸಿದ್ದು ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸುವ ಕುರಿತು ಉಭಯ ರಾಜ್ಯಗಳ ಮಾನ್ಯ ಸಚಿವರು ಹಾಗೂ ಅಧಿಕಾರಿಗಳು ಸಭೆಯನ್ನು ನಡೆಸಿ ಚರ್ಚಿಸಿ ಜಾಗದ ಗುತ್ತಿಗೆ ಸಮಸ್ಯೆಯನ್ನು ಇತ್ಯರ್ಥ ಪಡಿಸಿದ ಬಳಿಕ ಉದ್ದೇಶಿತ ವಸತಿ ಸಂಕೀರ್ಣವನ್ನು ನಿರ್ಮಿಸ ಬೇಕಾಗಿ ರುತ್ತದೆ.<br><br>ಶ್ರೀಶೈಲಂನಲ್ಲಿ ರೂ.85-00 ಕೋಟಿಗಳ ವೆಚ್ಚದಲ್ಲಿ ನೂತನ ವಸತಿ ಸಂಕೀರ್ಣವನ್ನು ನಿರ್ಮಿಸಲು 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಘೋಷಿಸಿದ್ದು ಈ ಉದ್ದೇಶಕ್ಕಾಗಿ ಪ್ರಥಮ ಹಂತದಲ್ಲಿ ರೂ.45-00 ಕೋಟಿಗಳನ್ನು ಮಂಜೂರು ಮಾಡಿದ್ದು ಈವರೆವಿಗೆ ರೂ.33-75 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನವನ್ನು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರಿಗೆ ಬಿಡುಗಡೆಗೊಳಿಸಲಾಗಿರುತ್ತದೆ. |

| | ಪ್ರಶ್ನೆ | ಉತ್ತರ |
|---|---|---|
| ಉ) | ಯಾತ್ರಿಕ ಭವನ ನಿರ್ಮಾಣಕ್ಕೆ ನಿಗದಿಪಡಿಸಿರುವ ಅನುದಾನವೆಷ್ಟು? ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ? | 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಘೋಷಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ:ಲೋ.ಇ 125 ಬಿಎಂಎಸ್ 2022 ದಿನಾಂಕ:25.08.2022 ರಲ್ಲಿ ಲೋಕೋಪಯೋಗಿ ಇಲಾಖಾ ವತಿಯಿಂದ ಆಂಧ್ರಪ್ರದೇಶದ ಶ್ರೀಶೈಲಂನಲ್ಲಿ ಯಾತ್ರಿ ನಿವಾಸ ಕಟ್ಟಡ ನಿರ್ಮಾಣ ಕಾಮಗಾರಿಯ ರೂ.85.00 ಕೋಟಿಗಳ ವಿವರವಾದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>ಈ ಉದ್ದೇಶಕ್ಕಾಗಿ ಸರ್ಕಾರವು ವಿವಿಧ ಆದೇಶಗಳಲ್ಲಿ ಈವರೆವಿಗೆ ಒಟ್ಟು ರೂ.33-75 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಯನ್ನು ಕೈಗೊಳ್ಳುವ ಉದ್ದೇಶ್ಯಕ್ಕಾಗಿ ಸದರಿ ಅನುದಾವನ್ನು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರಿಗೆ ಬಿಡುಗಡೆಗೊಳಿಸ ಲಾಗಿರುತ್ತದೆ. |

ಸಂಖ್ಯೆ: ಕಂಇ 157 ಮುಸಪ್ರ 2024

**(ರಾಮಲಿಂಗಾರೆಡ್ಡಿ)**
**ಸಾರಿಗೆ ಮತ್ತು ಮುಜರಾಯಿ ಸಚಿವರು**